UASB LIBRARY
Newspaper Clippings
Pg .1 Monday 25-10-2021 Jai Kisan



₹9 ಸಾವಿರ ಕೋಟಿ ಕೃಷಿ ಸಾಲ ನೀಡಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ ರೈತರಿಗೆ ಕೃಷಿ ಸಾಲ ನೀಡುವಲ್ಲಿ ಕಳೆದ ವರ್ಷ ಗುರಿ ಮೀರಿ ಸಾಧನೆ ಮಾಡಿದ್ದ ಸಹಕಾರ ಬ್ಯಾಂಕ್‌ಗಳು, ಈ ಸಾಲಿನಲ್ಲಿಯೂ ಶೇ.125 ಸಾಧನೆ ಮಾಡುವ ವಿಶ್ವಾಸ ಹೊಂದಿವೆ. ಎಲ್ಲ ರೈತರಿಗೂ ಸಾಲ ಸೌಲಭ್ಯ ಸಿಗಬೇಕೆಂಬ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ 30,85,644 ಜನರಿಗೆ 20,810 ಕೋಟಿ ರೂ. ಕೃಷಿ ಸಾಲ ನೀಡುವ ಗುರಿ ಹಾಕಿಕೊಳ್ಳಲಾಗಿದೆ. ಈಗಾಗಲೆ 12,35,033 ರೈತರಿಗೆ 9,136. 89 ಕೋಟಿ ರೂ. ಸಾಲ ನೀಡಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಅಕ್ಟೋಬರ್‌ನಲ್ಲೇ ಶೇ.72.76 ಸಾಧನೆ: ಪ್ರಸಕ್ತ ಸಾಲಿನ ಅಕ್ಟೋಬರ್ ತಿಂಗಳಿನಲ್ಲಿಯೇ ಅಲ್ಪಾವಧಿ, ಮಧ್ಯಮಾವಧಿ/ದೀರ್ಘಾವಧಿ ಸಾಲ ವಿತರಣೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ. ಅಲ್ಪಾವಧಿ ಸಾಲ ನೀಡಿಕೆ ವಿಭಾಗದಲ್ಲಿ 30,25,788 ರೈತರಿಗೆ 19,370 ಕೋಟಿ ರೂ. ಸಾಲ ನೀಡಿಕೆ ಗುರಿ ಹೊಂದಿದ್ದು, ಈಗಾಗಲೆ 12,25,027 ರೈತರಿಗೆ 8,742.10 ಕೋಟಿ ರೂ. ಸಾಲ ವಿತರಿಸಿ ಶೇ.45.55 ಸಾಧನೆ ತೋರಲಾಗಿದೆ. ಅಲ್ಲದೆ, ಮಧ್ಯಮಾವಧಿ/ದೀರ್ಘಾವಧಿ ವಿಭಾಗದಲ್ಲಿ 59,856 ರೈತರಿಗೆ 1,440 ಕೋಟಿ ರೂ. ಸಾಲ ನೀಡಿಕೆ ಗುರಿ ಹಾಕಿಕೊಳ್ಳಲಾಗಿದೆ. ಇದರಲ್ಲಿ 10,009 ರೈತರಿಗೆ 394.79 ಕೋಟಿ ರೂ. ಸಾಲವಾಗಿ ವಿತರಿಸಲಾಗಿದೆ ಎಂದಿದ್ದಾರೆ.



» ಪ್ರಸಕ್ತ ಸಾಲಿನಲ್ಲಿ ಶೇ.125 ಗುರಿ

» ಸಚಿವ ಎಸ್.ಟಿ. ಸೋಮಶೇಖರ್ ಮಾಹಿತಿ

ಕಳೆದ ಸಾಲಿನಲ್ಲಿ 25.12 ಲಕ್ಷ ರೈತರಿಗೆ 15,802 ಕೋಟಿ ರೂ. ಸಾಲ ನೀಡುವ ಗುರಿ ಹಾಕಿಕೊಳ್ಳಲಾಗಿತ್ತು. ನಾನು ಇಲಾಖೆಯಲ್ಲಿ ಕಾಲ ಕಾಲಕ್ಕೆ ಪ್ರಗತಿ ಪರಿಶೀಲನೆ ನಡೆಸಿದ್ದಲ್ಲದೆ, ಡಿಸಿಸಿ ಬ್ಯಾಂಕ್‌ಗಳಿಗೆ ಖುದ್ದು ಭೇಟಿ ನೀಡುವ ಮೂಲಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಾಕಷ್ಟು ಶ್ರಮವಹಿಸಿದ್ದೆ. ಅಲ್ಲದೆ, ಬ್ಯಾಂಕ್‌ಗಳ ಕುಂದುಕೊರತೆಗಳನ್ನೂ ನಿವಾರಿಸಿದ್ದೆ. ಈ ನಿಟ್ಟಿನಲ್ಲಿ 21 ಡಿಸಿಸಿ ಬ್ಯಾಂಕ್‌ಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದವು. ಇದರ ಪರಿಣಾಮವಾಗಿ 26,19,015 ರೈತರಿಗೆ 17,901.21 ಕೋಟಿ ರೂ. ಸಾಲ ವಿತರಿಸಿ ಒಟ್ಟು ಶೇಕಡಾ 115 ಸಾಧನೆ ತೋರಿದ್ದೇವೆ. ಈ ಬಾರಿ ನೂರಕ್ಕೆ ನೂರು ಗುರಿ ಮುಟ್ಟುವುದಲ್ಲದೆ, ಕಳೆದ ಬಾರಿಯ ಸಾಧನೆಗಿಂತಲೂ ಹೆಚ್ಚಿನ ಸಾಧನೆ ಮಾಡುವಲ್ಲಿ ನಮ್ಮೆಲ್ಲರ ಪ್ರಯತ್ನಗಳು ಸಾಗಿವೆ. ಹಾಗಾಗಿ ಪ್ರಸಕ್ತ ಬಾರಿ ಶೇ.125 ಸಾಲ ನೀಡಿಕೆಯತ್ತ ಚಿತ್ತ ಹರಿಸಿದ್ದೇವೆ ಎಂದು ಹೇಳಿದ್ದಾರೆ.

ಶೀಘ್ರ ಡಿಸಿಸಿ ಬ್ಯಾಂಕ್‌ಗಳ ಸಭೆ

ಡಿಸಿಸಿ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಶೀಘ್ರದಲ್ಲೇ ಕರೆದು ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದೇನೆ. ಈ ಮೂಲಕ ಬ್ಯಾಂಕ್‌ಗಳು ತೋರಿರುವ ಸಾಧನೆ, ಎದುರಿಸುತ್ತಿರುವ ಸಣ್ಣಪುಟ್ಟ ತೊಡಕುಗಳು, ಸಮಸ್ಯೆಗಳ ಬಗ್ಗೆಯೂ ಚರ್ಚಿಸಿ, ಪರಿಹಾರಗಳನ್ನು ಸೂಚಿಸಲಾಗುವುದು ಎಂದು ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಶೀಘ್ರ ರೇಷ್ಮೆ ಉಪ ಮಾರುಕಟ್ಟೆ ಸ್ಥಾಪನೆ



ತಿರಾ ನಗರದ ಶ್ರೀ ವಿವೇಕಾನಂದ ಕ್ರೀಡಾಂಗಣಕ್ಕೆ ರೇಷ್ಮೆ ಹಾಗೂ ಯುವಜನ ಸೇವಾ ಕ್ರೀಡಾ ಸಚಿವ ಡಾ.ನಾರಾಯಣ ಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಾಪಕ ಡಾ.ಸಿ.ಎಂ.ರಾಜೇಶ್ ಗೌಡ, ವಿಧಾನಪರಿಷತ್ ಸದಸ್ಯ ಚಿದಾನಂದ್ ಎಂ.ಗೌಡ ಇದ್ದರು.

ತಿರಾ: ತಾಲೂಕಿನಲ್ಲಿ ಆತಿ ಹೆಚ್ಚು ರೇಷ್ಮೆ ಬೆಳೆಯುತ್ತಿದ್ದು, ಬೆಳೆಗಾರರ ಅನುಕೂಲಕ್ಕಾಗಿ ತಿರಾದಲ್ಲಿ ಶೀಘ್ರ ರೇಷ್ಮೆ ಉಪಮಾರುಕಟ್ಟೆ ಹಾಗೂ ರೇಷ್ಮೆ ನೂಲಿನ ಕಾರ್ಖಾನೆ ಸ್ಥಾಪಿಸಲಾಗುವುದು. ಉಪಮಾರುಕಟ್ಟೆ ಸ್ಥಾಪನೆಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಮತ್ತೊಮ್ಮೆ ಸಭೆ ನಡೆಸಿ, ತೀರ್ಮಾನ ಮಾಡಲಾಗುವುದು ಎಂದು ರೇಷ್ಮೆ ಹಾಗೂ ಯುವಜನ ಸೇವಾ ಕ್ರೀಡಾ ಸಚಿವ ಡಾ. ನಾರಾಯಣಗೌಡ ಹೇಳಿದರು.

ನಗರದ ಶ್ರೀ ವಿವೇಕಾನಂದ ಕ್ರೀಡಾಂಗಣಕ್ಕೆ ಭೇಟಿ ನೀಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ತಾಲ್ಲೂಕಿನಲ್ಲಿ ರೇಷ್ಮೆ ನೂಲು ತೆಗೆಯುವ ಕಾರ್ಖಾನೆ ಹಾಗೂ ಉಪ ಮಾರುಕಟ್ಟೆ ಸ್ಥಾಪಿಸಲು ಶೀಘ್ರದಲ್ಲಿಯೇ ನಿರ್ದೇಶಕರನ್ನು ಕರೆಯಿಸಿ, ಸ್ಥಳ ಪರಿಶೀಲನೆ ನಡೆಸಿ ಕ್ರಮಕ್ಕೆಗೊಳ್ಳಲಾಗುವುದು ಎಂದರು.

ತಿರಾ ಕ್ರೀಡಾಂಗಣ ಅಭಿವೃದ್ಧಿ : ತಿರಾ ನಗರ ಅಭಿವೃದ್ಧಿಯಾಗುತ್ತಿದ್ದು, ಇಲ್ಲಿಗೆ ಒಂದು ಸುಸಜ್ಜಿತವಾದ ಜಿಮ್ ಅವಶ್ಯಕತೆ ಇದೆ ಅದನ್ನು ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿದಾಗ ಇನ್ನೊಂದು ತಿಂಗಳಲ್ಲಿ ತಿರಾ ನಗರಕ್ಕೆ ಒಂದು ಜಿಮ್ ಮಂಜೂರು ಮಾಡಲಾಗುವುದು ಹಾಗೂ ತಿರಾ ತಾಲೂಕು ಕ್ರೀಡಾಂಗಣಕ್ಕೆ ಅವಶ್ಯವಿರುವ 4 ಎಕರೆ ಜಾಗ ಗುರುತಿಸಿ ಕ್ರೀಡಾಂಗಣವನ್ನು ಉನ್ನತೀಕರಣಗೊಳಿಸಲಾಗುವುದು, ಕ್ರೀಡಾಂಗಣದ ಅಭಿವೃದ್ಧಿ ಕುರಿತು ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸುತ್ತೇನೆ. ಅದಷ್ಟು ಬೇಗ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಸೇರಿದಂತೆ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ ಆರಂಭಿಸಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ರೇಷ್ಮೆ ಬೆಳೆಗಾರರಿಗೆ ಮನೆ:

ರೇಷ್ಮೆ ಬೆಳೆಗಾರರಿಗೆ ಅನ್ಯಾಯವಾಗದಂತೆ ಕಳೆದ ಲಾಕ್‌ಡೌನ್ ಸಮಯದಲ್ಲಿ ರೇಷ್ಮೆ ಬೆಳೆಯನ್ನು ಇಲಾಖೆ ಖರೀದಿಸಿತ್ತು. ರೇಷ್ಮೆ ಇಲಾಖೆ ರೈತರ ಪರವಾಗಿದ್ದು, ಸದ್ಯದಲ್ಲಿ ತಿರಾ ತಾಲ್ಲೂಕಿಗೆ ರೇಷ್ಮೆ ಬೆಳೆಗಾರರಿಗೆ ಹೆಚ್ಚು ಮಹಿಳೆಗಳನ್ನು ಮಂಜೂರು ಮಾಡಲಾಗುವುದು. ರೇಷ್ಮೆ ಬೆಳೆಯ ಮಾರಾಟಕ್ಕೆ ಶೀಘ್ರದಲ್ಲಿ ಫೈಟಿಕ್ ಯಂತ್ರಗಳನ್ನು ಸ್ಥಾಪಿಸಿ, ಸಿಸಿ ಕ್ಯಾಮೆರಾ ಅಳವಡಿಸಲಾಗುವುದು ಇದರಿಂದ ರೈತರಿಗೆ ತೂಕದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ ಎಂದರು.

ವಿಮಾನ ನಿಲ್ದಾಣದಲ್ಲಿ ಶಾಪಿಂಗ್ ಮಾಲ್: ಪ್ರಪಂಚದಲ್ಲಿ ಮೈಸೂರ್ ಸಿಲ್ಕ್ ಸೀರೆಗಳಿಗೆ ಉತ್ತಮ ಬೇಡಿಕೆಯಿದ್ದು, ಹೀಗಾಗಿ ಪ್ರತಿ ವಿಮಾನನಿಲ್ದಾಣದಲ್ಲೂ ಒಂದೊಂದು ಶಾಪಿಂಗ್ ಮಾಲ್ ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ 1 ಲಕ್ಷ ಸೀರೆ ಸಿದ್ಧಪಡಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ 1 ಲಕ್ಷ ಸೀರೆ ತಯಾರಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ. ಎಲ್ಲಿಲ್ಲಿ ಬೇಡಿಕೆಯಿದೆ, ಅಲ್ಲಿಗೆ ಶಾಪಿಂಗ್ ಮಾಲ್ ತೆರೆಯಲಾಗುವುದು ಎಂದರು.

25-10-2021 Vsv Pg 11

125% ಕೃಷಿ ಸಾಲ ವಿತರಣೆ ಗುರಿ: ಎಸ್‌ಟಿಎಸ್

ಕಳೆದ ಬಾರಿ ಶೇ.115ರಷ್ಟು ಸಾಧನೆ ಮಾಡಿದ್ದೆವು | ಈ ವರ್ಷದ ಗುರಿ ಇನ್ನಷ್ಟು ಹೆಚ್ಚಳ: ಸಹಕಾರ ಸಚಿವ

• ಕನ್ನಡಪ್ರಭ ವಾರ್ತೆ ಬೆಂಗಳೂರು

ರೈತರ ಸ್ವಾವಲಂಬಿ ಬದುಕಿಗೆ ಪೂರಕವಾಗಿ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಿದೆ. 12,35,033 ರೈತರಿಗೆ 9,136.89 ಕೋಟಿ ರು. ಕೃಷಿ ಸಾಲ ನೀಡಲಾಗಿದೆ. ಕಳೆದ ಬಾರಿ ಸಾಲ ನೀಡಿಕೆಯಲ್ಲಿ ಮಾಡಲಾಗಿದ್ದ ಶೇ.115ರಷ್ಟು ಸಾಧನೆ ಮೀರಿ ಈ ಬಾರಿ ಶೇ.125ರಷ್ಟು ಸಾಧನೆ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೆಖರ್ ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಎಲ್ಲ ರೈತರಿಗೂ ಸಾಲ ಸೌಲಭ್ಯ ಸಿಗಬೇಕು ಎಂದು ಪ್ರಸಕ್ತ ಸಾಲಿನಲ್ಲಿ 30,85,644 ರೈತರಿಗೆ 20,810 ಕೋಟಿ ರು. ಕೃಷಿ ಸಾಲ ನೀಡುವ ಗುರಿ ಹಾಕಿಕೊಳ್ಳಲಾಗಿತ್ತು. ಈಗಾಗಲೇ 12,35,033 ರೈತರಿಗೆ 9,136.89 ಕೋಟಿ ರು. ಸಾಲ ನೀಡಿದ್ದೇವೆ. ಮುಂತಾದ ಶೇ. 72.96 ಸಾಧನೆಯನ್ನು ಈಗಾಗಲೇ ಮಾಡಿದ್ದೇವೆ. ಅಕ್ಟೋಬರ್‌ನಲ್ಲೇ ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಣೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ. ಕಳೆದ ಬಾರಿ ಶೇ.115ರಷ್ಟು ಸಾಧನೆ ಮಾಡಿದ್ದು ಈ ಸಲ ಶೇ. 125ರಷ್ಟು ಸಾಧನೆ ಮಾಡುವ ಗುರಿ ಇದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಳೆದ ಸಾಲಿನಲ್ಲಿ 25.12 ಲಕ್ಷ ರೈತರಿಗೆ 15,802 ಕೋಟಿ ರು. ಸಾಲ ನೀಡುವ ಗುರಿ ಹಾಕಿಕೊಳ್ಳಲಾಗಿತ್ತು. ಆದರೆ, ಕಾಲ ಕಾಲಕ್ಕೆ ಪ್ರಗತಿ ಪರಿಶೀಲನೆ ನಡೆಸಿ, ಡಿಸಿಸಿ ಬ್ಯಾಂಕ್‌ಗಳಿಗೆ ಖುದ್ದು ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸಿದ್ದರಿಂದ 21 ಡಿಸಿಸಿ ಬ್ಯಾಂಕ್‌ಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದವು. ಇದರ ಪರಿಣಾಮವಾಗಿ 26,19,015 ರೈತರಿಗೆ 17,901.21 ಕೋಟಿ ರು. ಸಾಲ ವಿತರಣೆ ಮಾಡಿ ಶೇ.115 ರಷ್ಟು ಸಾಧನೆ ತೋರಿದ್ದೇವೆ. ರೈತರ ಕೃಷಿ ಚಟುವಟಿಕೆಗೆ ಸಮಸ್ಯೆಯಾಗದಂತೆ ಸಾಲ ನೀಡಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಡಿಸಿಸಿ ಬ್ಯಾಂಕ್‌ಗಳ ಸಭೆ ಶೀಘ್ರ: ಸಚಿವ



ಡಿಸಿಸಿ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಶೀಘ್ರದಲ್ಲೇ ಕರೆದು ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗುವುದು. ಬ್ಯಾಂಕ್‌ಗಳು ತೋರಿರುವ ಸಾಧನೆ, ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪರಿಹಾರ ಸೂಚಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ತಿಳಿಸಿದ್ದಾರೆ.

25-10-2021 Kp Pg 04

25-10-2021 Vv Pg 10

"The struggle is a part of the journey"

'Farm lending in co-op. sector on track in Karnataka'

Minister says the target is 125% achievement

SPECIAL CORRESPONDENT
BENGALURU

Nearly 12.35 lakh farmers in Karnataka have been provided with about ₹9,100 crore in farm loans through the cooperative sector this year so far, Cooperation Minister S.T. Somashekar said on Sunday.

The State has set a target of lending ₹20,810 crore to about 30 lakh farmers this year. While Karnataka achieved 115% loan disbursement through DCC bank last year, it has set a target of achieving 125%.

In a statement issued here on Sunday, the Minister said the State Government was working towards providing loans to all farmers through various programmes. "The Government is trying to ensure that no farmer is inconvenienced. Chief Minister Basavaraj Bommai has directed us to make farm loan disbursal efficient," he said.



Karnataka has set a target of lending ₹20,810 crore to about 30 lakh farmers this year. • FILE PHOTO

The Government is trying to ensure that no farmer is inconvenienced. Chief Minister Basavaraj Bommai has directed us to make farm loan disbursal efficient

S.T. SOMASHEKAR,
Cooperation Minister

Achieving targets

Mr. Somashekar added, "We have reached 72.76% of the target in the month of October. Substantial success has been achieved in disbursal of short-term, medium-term, and long-term loans."

Providing a break-up, the Minister said the Government has set a target of disbursing short-term loans of ₹19,370 crore to 30.25 lakh farmers, of whom 12.25 lakh have received ₹8,742 crore, which is about 45% of the target. For medium-term and long-term loan disbursal, a target has been set to provide about ₹1,440 crore to about 59,900 farmers, of whom about 10,000 have already received ₹395 crore. This is about 27.41 % of the annual target. "In all, a total of 12.35 lakh farmers have received ₹9,136 crore till October 23," he said.

The Minister said that a total of 26.19 lakh farmers had received a total credit of ₹17,901 crore during 2020-21 as against the target of providing ₹15,802 crore credit to 25.12 lakh farmers. "However, due to intense monitoring and good work of 21 DCC banks, 115% of the target was achieved. I am confident of achieving the target and more this year too. We are focused on achieving 125% of the target."

Mr. Somashekar also said that he would be convening a meeting of the CEOs of the DCC banks to review the performance and discuss the bottlenecks in their work to find solutions. Despite the COVID 19 pandemic and the tight financial condition of the Karnataka exchequer, the DCC banks and primary agriculture cooperative societies have been directed to ensure lending remain seamless to protect agricultural activities, he added.

25-10-2021
Hindu Pg 05

ರೈತರಾದರೆ ಸಾಲದು, ರೈತೋದ್ಯಮಿಗಳಾಗಬೇಕು!

ರೈತ ಉದ್ಧಾರವಾಗಬೇಕಾದ್ರೆ ಬರೀ ಬೆಳೆ ಬೆಳೆದರೆ ಸಾಲದು, ತಾನು ಬೆಳೆದ ಬೆಳೆಗೆ ಬೆಲೆ ಕಟ್ಟುವ ಶಕ್ತಿ ಬೆಳೆಸಿಕೊಳ್ಳಬೇಕು. ಒಮ್ಮೆ ಯೋಚಿಸಿ ನೋಡಿ, ಮಾರ್ಕೆಟ್‌ನಲ್ಲಿರುವ ಎಲ್ಲ ವಸ್ತುಗಳಿಗೂ ಎಂಆರ್‌ಪಿ ಅಂದರೆ ಗರಿಷ್ಠ ಮಾರಾಟ ದರ ನಿಗದಿಯಾಗಿರುತ್ತದೆ. ಆದರೆ, ಅನ್ನದಾತ ಬೆಳೆಯುವ ಉತ್ಪನ್ನಗಳಿಗೆ ಮಾತ್ರ ಸರ್ಕಾರ ಎಂಎಸ್‌ಪಿ - ಕನಿಷ್ಠ ಬೆಂಬಲಬೆಲೆ ಕೊಡುತ್ತಿದೆ. ದಲ್ಲಾಳಿಗಳು, ಶಾಪಿಂಗ್ ಮಾಲ್‌ಗಳು ಮತ್ತು ದೈತ್ಯ ಕಾರ್ಪೋರೇಟ್ ಕಂಪನಿಗಳು ರೈತನ ಪರಿಶ್ರಮದ ಬೆಳೆಗೆ ಬೆಲೆ ಕಟ್ಟುತ್ತಿವೆ. ಯಾಕೆ ಹೀಗಾಗುತ್ತಿದೆ ಎಂದು ನೋಡಿದಾಗ ರೈತನಿಗೆ ತಾನು ಬೆಳೆದ ಬೆಳೆಗೆ ಉತ್ತಮ ಬೆಲೆ ಕಂಡುಕೊಳ್ಳುವುದು ಹೇಗೆ ಎನ್ನುವುದು ತಿಳಿದಿಲ್ಲ. ಉತ್ಪನ್ನಕ್ಕೆ ಯಾವುದೋ ಒಂದು ಬೆಲೆ ನಿಗದಿಯಾಗಿ ಒಂದಷ್ಟು ಹಣ ಸಿಕ್ಕರೆ ಸಾಕು ಎನ್ನುವ ಆಲೋಚನೆಯಲ್ಲಿ ರೈತನಿದ್ದಾನೆ. ಪರಿಣಾಮ ರೈತನೊಬ್ಬನನ್ನು ಬಿಟ್ಟು ಕೃಷಿಯಿಂದ ಮತ್ತೆಲ್ಲರೂ ಲಾಭ ಮಾಡಿಕೊಳ್ಳುತ್ತಿದ್ದಾರೆ. ರೈತ ಶ್ರೀಮಂತನಾಗಬೇಕಾದರೆ ಇರುವ ಒಂದು ಉತ್ತಮ ಮಾರ್ಗ ರೈತೋದ್ಯಮಿಯಾಗುವುದು.

ರೈತೋದ್ಯಮಿ ಎಂದರೆ? ಕೃಷಿಯನ್ನು ಉದ್ಯಮ ಎಂದು ಪರಿಗಣಿಸಿ ಅದಕ್ಕೆ ಪೂರಕವಾಗಿ ಕೃಷಿ ಚಟುವಟಿಕೆಗಳನ್ನು ಮಾಡುವವನೇ ರೈತೋದ್ಯಮಿ. ಮಾರುಕಟ್ಟೆಗೆ ಬೇಕಾದ ಉತ್ಪನ್ನ ಬೆಳೆದು ಅದಕ್ಕೆ ಬೆಲೆ ಕಟ್ಟುವ ಸಾಮರ್ಥ್ಯ ಬೆಳೆಸುಕೊಳ್ಳುವವನೇ ರೈತೋದ್ಯಮಿ. 'ಆಪ್ಪ ಹಾಕಿದ ಆಲದ ಮರ' ಎಂದು ಜೋತು ಬೀಳದೆ ನಿರ್ದಿಷ್ಟ ಬೆಳೆಗೆ ಬೇಡಿಕೆ ಇದೆಯಾ? ಬೇಡಿಕೆ ಇಲ್ಲದಿದ್ರೆ ಯಾವ ಪರ್ಯಾಯ ಬೆಳೆ ಬೆಳೆಯಬೇಕು? ಬೇಡಿಕೆ ಇರುವ ಬೆಳೆಗಳನ್ನು ಬೆಳೆಯೋದು ಹೇಗೆ? ಕೃಷಿ ಕ್ಷೇತ್ರದಲ್ಲಿ ಆಗಿರುವ ಹೊಸ ಆವಿಷ್ಕಾರಗಳೇನು? ಉತ್ಪನ್ನಕ್ಕೆ ಮಾರುಕಟ್ಟೆ ಎಲ್ಲಿದೆ? ಬೆಳೆಯುವ ಉತ್ಪನ್ನದಿಂದ ಮೌಲ್ಯವರ್ಧನೆ ಮಾಡಿ ಹೆಚ್ಚು ಸಂಪಾದಿಸಬಹುದಾ? ಯಾವ ಸೀಸನ್‌ನಲ್ಲಿ ಯಾವ ಬೆಳೆಗೆ ಡಿಮಾಂಡ್ ಇದೆ? ಹೀಗೆ ಕೃಷಿಯನ್ನು ಲಾಭದಾಯಕವಾಗಿಸಲು ಯೋಜನೆ ರೂಪಿಸಿ ಕಾರ್ಯಪ್ರವೃತ್ತನಾಗುವವನೇ ರೈತೋದ್ಯಮಿ.

ಮೇಕೆ ಹಾಲು ಮಾರಾಟ ಮಾಡಿ ತಿಂಗಳಿಗೆ 10 ಲಕ್ಷ ರೂ. ಸಂಪಾದಿಸುತ್ತಿರುವ ರೈತ: ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಯುವ ರೈತರೊಬ್ಬರು 400 ಮೇಕೆಗಳ ಫಾರಂ ಆರಂಭಿಸಿ ತಿಂಗಳಿಗೆ ಸುಮಾರು 10 ಲಕ್ಷ ರೂಪಾಯಿ ಸಂಪಾದಿಸುತ್ತಿದ್ದಾರೆ. ಮೇಕೆ ಹಾಲಿಗೆ ಭರ್ಜರಿ ಬೇಡಿಕೆ ಇರುವುದರಿಂದ ಪ್ರತಿನಿತ್ಯ 130 ಲೀಟರ್ ಹಾಲು ಮಾರಾಟ ಮಾಡುತ್ತಿದ್ದಾರೆ. ಪ್ರತಿ ಲೀಟರ್ ಮೇಕೆ ಹಾಲು 250 ರೂ.ಗೆ ಮಾರಾಟವಾಗುತ್ತಿದೆ. ಮೇಕೆ ಹಾಲಿನ ಜತೆಗೆ ಚೀಸ್, ತುಪ್ಪಕ್ಕೂ ಬೇಡಿಕೆ ಇದೆ. ಮೇಕೆಗಳ ತಳಿ ಸಂವರ್ಧನೆಯಿಂದಲೂ ಆದಾಯ ಗಳಿಸುತ್ತಿದ್ದಾರೆ. ಆ ಯಶಸ್ವಿ ರೈತ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ 'ರೈತೋದ್ಯಮಿ ಆಗುವುದು ಹೇಗೆ?' ಎನ್ನುವ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ.

4 ಗುಂಟೆಯಲ್ಲಿ ವರ್ಷಕ್ಕೆ 15 ಲಕ್ಷ ರೂ. ದುಡಿಯುತ್ತಿರುವ ರೈತ: ತುಮಕೂರು ಜಿಲ್ಲೆಯ ಹಳ್ಳಿಯೊಂದರ ರೈತ 4 ಗುಂಟೆ ಜಾಗದಲ್ಲಿ ಮೀನು, ಜೇನು, ಹೈನುಗಾರಿಕೆ, ಕುರಿ ಮತ್ತು ಕೋಳಿ ಸಾಕಣೆ ಮಾಡಿ ವರ್ಷಕ್ಕೆ 15 ಲಕ್ಷ ರೂ. ದುಡಿಯುತ್ತಿದ್ದಾರೆ. ಸಣ್ಣ ಭೂಮಿಯಲ್ಲಿ ಯಾವ ಕೃಷಿ ಮಾಡಲು ಸಾಧ್ಯ ಎನ್ನುವವರಿಗೆ ತಕ್ಕ ಉತ್ತರ ಕೊಟ್ಟಿದ್ದಾರೆ. ಸಮಗ್ರ ಬೇಸಾಯ ಪದ್ಧತಿ ಅಳವಡಿಸಿಕೊಂಡು, ಕೃಷಿಯ ಉಪ ಕಸುಬುಗಳನ್ನು ಮಾಡಿದರೆ ರೈತರು ದಾಯ ಹೆಚ್ಚಿಸಿಕೊಳ್ಳಬಹುದು ಎನ್ನುವುದಕ್ಕೆ ಇವರೇ ನಿದರ್ಶನ. ಈ ಯುವ ಪ್ರತಿಭಾವಂತ ರೈತ 'ಫೈನಾನ್ಸಿಯಲ್ ಫ್ರೀಡಂ ಆ್ಯಪ್'ನಲ್ಲಿ ತಮ್ಮ ಯಶೋಗಾಥೆ ತೆರೆದಿಟ್ಟಿದ್ದಾರೆ.

ನುಗ್ಗೆ ಸೊಪ್ಪಿನ ಪೌಡರ್ ಮಾಡಿ ಲಕ್ಷ ಲಕ್ಷ ದುಡಿಯುತ್ತಿರುವ ರೈತ: ನುಗ್ಗೇ ಸೊಪ್ಪಿನಲ್ಲಿ ಸಂಬಾರ್ ಮಾಡಬಹುದು, ಅದಕ್ಕಿಂತ ಹೆಚ್ಚಿಗೆ ಏನು ಸಾಧ್ಯ? ಎಂದು ಬಹುತೇಕರು ಆಂದುಕೊಂಡಿರುತ್ತಾರೆ. ಆದರೆ ಕೊಪ್ಪಳದ ರೈತರೊಬ್ಬರು ನುಗ್ಗೆ ಸೊಪ್ಪು ಬೆಳೆದು ಅದರ ಪುಡಿ ಮಾಡಿ ವಿದೇಶಕ್ಕೆ ರಫ್ತು ಮಾಡುವ ಮೂಲಕ ಲಕ್ಷಾಂತರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ. 85 ಎಕರೆ ಪ್ರದೇಶದಲ್ಲಿ ನುಗ್ಗೆ ಸೊಪ್ಪು ಬೆಳೆದಿರುವ ಅವರು ಒಂದು ಕೆಜಿ ನುಗ್ಗೆ ಸೊಪ್ಪಿನ ಪೌಡರ್ ಅನ್ನು 3,500 ರೂ.ಗೆ ಮಾರಾಟ ಮಾಡುತ್ತಿದ್ದಾರೆ. ವಿದೇಶದಲ್ಲಿ ನುಗ್ಗೆ ಸೊಪ್ಪಿನ ಪುಡಿಗೆ ಭಾರಿ ಬೇಡಿಕೆ ಇರುವುದನ್ನು ಮನಗಂಡು ಈ ರೀತಿಯ ವಿಭಿನ್ನ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಬರೀ ನುಗ್ಗೆ ಸೊಪ್ಪು ಮಾತ್ರವಲ್ಲ, ನುಗ್ಗೆ ಟೀ ಪೌಡರ್, ಎಣ್ಣೆ, ಕ್ಯಾಪ್ಸೂಲ್, ಮಾತ್ರೆಗಳನ್ನು ಅವರು ತಯಾರಿಸುತ್ತಿದ್ದಾರೆ. 'ಫೈನಾನ್ಸಿಯಲ್ ಫ್ರೀಡಂ ಆ್ಯಪ್'ನಲ್ಲಿ ಕೊಪ್ಪಳದ ರೈತ, ಇತರ ರೈತರೂ ಹೇಗೆ ಆದಾಯ ಹೆಚ್ಚಿಸಿಕೊಳ್ಳಬಹುದು ಎನ್ನುವ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ.

1,200 ರೂ. ಗೆ ಕೆ.ಜಿ. ಜೇನು ಮಾರಾಟ ಮಾಡುತ್ತಿರುವ ರೈತ: ಸೂಪರ್ ಮಾರ್ಕೆಟ್‌ನಲ್ಲಿ ಸುಮಾರು 300 ರೂ.ಗೆ ಒಂದು ಕೆ.ಜಿ. ಜೇನುತುಪ್ಪ ಸಿಗುತ್ತದೆ. ಆದರೆ ದಾಂಡೇಲಿಯ ರೈತರೊಬ್ಬರು 1,200 ರೂ.ಗೆ ಒಂದು ಕೆ.ಜಿ. ಜೇನುತುಪ್ಪ ಮಾರಾಟ ಮಾಡುತ್ತಿದ್ದಾರೆ. ಅಯ್ಯೋ ಜನರೇಕೆ ಇಷ್ಟು ದುಬಾರಿ ಹಣ ಕೊಡುತ್ತಿದ್ದಾರೆ ಅಂತ ನಿಮಗೆ ಅನಿಸಬಹುದು. ಆದರೆ, ಆ ರೈತ ಹಸಿ ಪಾರ್ಕ್‌ವೊಂದನ್ನು ನಿರ್ಮಿಸಿದ್ದಾರೆ. ಹಸಿ ಪಾರ್ಕ್‌ನಲ್ಲಿ ಜೇನು ತುಪ್ಪ ಹೇಗೆ ಉತ್ಪತ್ತಿಯಾಗುತ್ತದೆ, ಯಾವ ಜೇನು ಯಾವ ಆರೋಗ್ಯಕ್ಕೆ ಸೂಕ್ತ, ಜೇನು ಬಳಸುವುದರಿಂದ ಆಗುವ ಪರಿಣಾಮವೇನು? ಹೀಗೆ ಜೇನು ತುಪ್ಪದ ಎಲ್ಲ ಆಯಾಮಗಳನ್ನು ಜನರಿಗೆ ತಿಳಿಸುತ್ತಾರೆ. ಇಷ್ಟೆಲ್ಲ ತಿಳಿಸಿದ ಮೇಲೆ, ನಿರ್ದಿಷ್ಟ ಜೇನನ್ನು ಎಲ್ಲಿಂದ ಸಂಗ್ರಹಿಸಲಾಗಿದೆ, ಅದು ಕಾಡು ಜೇನೋ ಇಲ್ಲ, ಸಾಕಿದ ಜೇನೋ? ಎನ್ನುವ ಬಗ್ಗೆಯೂ ಮಾಹಿತಿ ಒದಗಿಸುತ್ತಾರೆ. ಎಲ್ಲಕ್ಕಿಂತಲೂ ಮುಖ್ಯವಾಗಿ ತಾವು ಮಾರಾಟ ಮಾಡುತ್ತಿರುವುದು ಉತ್ಕೃಷ್ಟ ಗುಣಮಟ್ಟದ ಜೇನು ಎನ್ನುವುದನ್ನು ಅವರು ನಿರೂಪಿಸುತ್ತಾರೆ. ಹಾಗಾಗಿ ಹೆಚ್ಚು ಹಣ ಕೊಟ್ಟು ಆ ರೈತನ ಬಳಿ ಜನ ಜೇನು ಖರೀದಿಸುತ್ತಾರೆ. ನಾವು ಬೆಳೆದ ಉತ್ಪನ್ನಕ್ಕೆ ಮಾರುಕಟ್ಟೆ ಇಲ್ಲ ಎಂದು ಕೊರಗುವ ಬದಲು, ಮಾರುಕಟ್ಟೆಯನ್ನು ಹೇಗೆ ಸೃಷ್ಟಿಸಬಹುದು ಎನ್ನುವುದಕ್ಕೆ ಆ ರೈತೋದ್ಯಮಿಯೇ ನಿದರ್ಶನ.



ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com



ಯಶಸ್ವಿಯಾಗಲು ಹೀಗೆ ಮಾಡಿ

ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ಕೃಷಿ, ಬಿಸಿನೆಸ್ ಮತ್ತು ಹಣಕಾಸು ನಿರ್ವಹಣೆ ಬಗ್ಗೆ ಕನ್ನಡದಲ್ಲೇ ನೂರಾರು ಕೋರ್ಸ್‌ಗಳಿವೆ. ಈ ಕೋರ್ಸ್‌ಗಳಲ್ಲಿ ನಿರ್ದಿಷ್ಟ ಕ್ಷೇತ್ರಗಳ ದೊಡ್ಡ ಸಾಧಕರೇ ಮಾರ್ಗದರ್ಶನ ಮಾಡಿದ್ದಾರೆ. ಇನ್ನೇಕೆ ತಡ ಈಗಲೇ ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ, ಆದಾಯ ಹೆಚ್ಚಳದ ಮಾರ್ಗ ಕಂಡುಕೊಳ್ಳಿ.

ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ

ವಿಜಯವಾಣಿ ಓದುಗರಿಗೆ 2,000 ರೂ. ಸ್ಕಾಲರ್‌ಶಿಪ್

ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ. VIJAYAVANI ಎಂದು ರೆಫರಲ್ ಕೋಡ್ ಬಳಸಿ, 2,000 ರೂ. ಸ್ಕಾಲರ್‌ಶಿಪ್ ಪಡೆಯಿರಿ.

For more information visit
University Library Website
Web - uasbagrilibindia.org
E-mail- librarian@uasbangalore.edu.in

25-10-2021
Vv Pg 06